doc-129
T.P-2

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 167 | ಬುಧವಾರ 13—3—46 | ಬೆಲೆ ಪ್ರತಿ 3 ಪೈ

ಪ್ರಪಂಚದಲ್ಲಿನ ಹೆಚ್ಚು ಆಸ್ತಿವಂತರು

ಂ ಂ

ಪ್ರಪಂಚದ ಆಸ್ಥಾನದಲ್ಲೆಲ್ಲಾ ಹೈದರಾಬಾದಿನ ನೈಜಾಮರಿಗೇ ಅಗ್ರಸ್ಥಾನ. ಅವರಲ್ಲಿರುವ ಕೇವಲ ವಜ್ರಗಳ ಬೆಲೆಯೇ ಸುಮಾರು 400 ಕೋಟಿ ರೂ. ಗಳಾಗುವುದಂತೆ! ಅಪೂರ್ವವಾದ ಚಿನ್ನದ ಭಂಡಾರವಿದೆ. ಅದರಲ್ಲೊಂದು ಮೇಜು 150 ಜನ ಅತಿಥಿಗಳ ಆತಿಥ್ಯಕ್ಕೆ ಆಣಿಯಾಗುವುದಂತೆ; ಅವರ ಸ್ವಂತ ಆದಾಯ 4 ಕೋಟಿಯಿದ್ದರೂ ತಸಗಾಗಿ ಅವರು ಖರ್ಚು ಮಾಡುವುದು ತಿಂಗಳಿಗೆ ಕೇವಲ 65 ರೂ. ಮಾತ್ರವಂತೆ. ಅವರ ಮನೆಯ ವೆಚ್ಚವೆಲ್ಲವನ್ನೂ ರಾಜ್ಯವೇ ವಹಿಸಿಕೊಳ್ಳುವುದು.

ವಿಜಯದಿನವಾದ ಮೇಲೆ ನೈಜಾಮರ ಬಗ್ಗೆ ನಾವೀಗ ಹೀಗೆ ಹೇಳಬಹುದಾದರೂ ಅದಕ್ಕೆ ಮುಂಚೆ ಜಪಾನು ಚಕ್ರವರ್ತಿಯಾದ ಹಿರೋಹಿಟೋ ಎಂಬುವನೆ ವಿಶ್ವದ ವಿಖ್ಯಾತ ಶ್ರೀಮಂತನಾಗಿದ್ದ.

'ಸ್ವರ್ಗ ಸುಖ' ಸೆಂಬ ಅಭಿಧಾನ ವಿರುವ ಈತನಿಗೆ ಎಷ್ಟು ಆಸ್ತಿ ಇತ್ತೆಂದರೆ, ಅದರಿಂದ ಈತನಿಗೆ ಬರುತ್ತಿದ್ದ ವಾರ್ಷಿಕ ಆದಾಯ (ಸ್ವಂತ) 32 ಕೋಟಿ ರೂ. ಈ ಆದಾಯಕ್ಕೆ ತೆರಿಗೆ ಕೊಡಬೇಕಾಗಿರಲಿಲ್ಲ. ಜಪಾನಿನ ಅರಣ್ಯ ಸಂಪತ್ತೆಲ್ಲಾ ಈತನದೇ. ಟೋಕಿಯೊ ವಿನ ವಾಣಿಜ್ಯ ಕ್ಷೇತ್ರವೆಲ್ಲಾ ಇವನದು. ಜಪಾನು ವ್ಯಾಪಾರದಲ್ಲಿ ಅನೇಕ ಭಾಗ ಇವನಿಗೆ ಸೇರಿತ್ತು. ಕೂತಿದ್ದರೂ ವಾರಕ್ಕೆ ಇವನಿಗೆ 65 ಲಕ್ಷ ರೂ. ಆದಾಯ ಬರುತ್ತಿದ್ದರೂ ಇವನದು ಬಹಳ ಸಾದಾ ರೀತಿ. ಅವನ ಕೈ ಗಡಿಯಾರ ಕೇವಲ 10 ರೂಪಾಯಿನದು. (ಪೌ)

ಹೋಟಲುಗಳಲ್ಲಿ ಪಿಂಡ ವ್ಯವಸ್ಥೆ

ಮೈಸೂರು, ಮಾ 13 — ಮೈಸೂರಿನ ಊಟದ ಹೋಟಲುಗಳಲ್ಲಿ ಇನ್ನು ಮೇಲೆ ರೇಷನ್ ನಿಯಮಕ್ಕನುಸಾರವಾಗಿ ಅನ್ನವನ್ನು ಮಾಡುವುದಾಗಿ ತಿಳಿಯಬಂದಿದೆ. ತಲಾ ಅರ್ಧ ಪಾವು ಅಕ್ಕಿಯ ಅನ್ನವನ್ನು ಗೋಧಿ ರೊಟ್ಟಿ ಇತ್ಯಾದಿಗಳ ಜೊತೆ ಕೊಡುವಂತೆ. ಆ ಅರ್ಧ ಪಾವು ಅಕ್ಕಿಯ ಅನ್ನದಲ್ಲಿ ಎರಡು ಪಿಂಡಗಳನ್ನು ಕಟ್ಟಿ ಎಲೆಯಲ್ಲಿ ಹಾಕಿ ಬಡಿಸುವುದಂತೆ. ಅದಕ್ಕೆ ಹೆಚ್ಚಿಗೆ ಕೇಳಿದರೆ ಬಡಿಸುವುದಿಲ್ಲವಂತೆ.

ದಕ್ಷಿಣ ಆಫ್ರಿಕಾಕ್ಕೆ ಪ್ರತೀಕಾರ

ಭಾರತೀಯರೇ ಸಂಘಟಿತರಾಗಿ

ಬ್ರಿಟನ್ನಿಗೆ ಭಾರತವೆಂಬುದು ಚಿನ್ನದ ಮೊಟ್ಟೆಯಿಡುವ ಬಾತು ಕೋಳಿಯಂತಾಗಿ ಬಿಟ್ಟಿದೆ. ದ್ವಿತೀಯ ಜಾಗತಿಕ ಸಂಗ್ರಾಮದ ನಂತರ ಬ್ರಿಟೈನು 3 ನೇ ತರಗತಿಯ ಶಕ್ತಿಯಾಗಿ ಬಿಟ್ಟಿದೆ. ಬ್ರಿಟೈನಿನ ಕಾರ್ಖಾನೆಗಳು ಬಾಂಬಿಗಾಹುತಿಯಾಗಿ ನಾಶವಾದುವು. ಆದುದರಿಂದ ಈ ಸಂದರ್ಭದಲ್ಲಿ ಬ್ರಿಟಿಷರು ತಾವಾಗಿ ಭಾರತ ತೊರೆಯುವುದಾದರೂ ಹೇಗೆ? ಬ್ರಿಟಿಷರು ಭಾರತದಲ್ಲಿರುವವರೆಗೆ ಭಾರತವು ಗುಲಾಮಿಸ್ತಾನವಾಗಿಯೇ ಉಳಿಯುವುದು. ನನುಗೆ ಪಾಕೀಸ್ತಾನ, ಖಾಕೀಸ್ತಾನ, ಕೈಸ್ತಸ್ತಾನ ಇವು ಯಾವುದು ಬೇಕಾಗಿದ್ದರೂ ಮೊದಲು ಭಾರತೀಯರು ಸಂಘಟಿತರಾಗಿ ಬ್ರಿಟಿಷರನ್ನು ಓಡಿಸಬೇಕೆಂಬು ದಾಗಿ ಕೇ ॥ ಸಾ ನವಾಜರು ಹೇಳಿದ್ದಾರೆ.

ಕ್ವೆಟ್ಟಾ ಮಾ 11— ಬೆಲೂಚಿಸ್ತಾನದಲ್ಲಿ ಏಟಿಂಗುಗಳು ನಡೆಸಲ್ಪಡದಂತೆ ಪ್ರತಿಬಂಧಕಾಜ್ಞೆ ಹೊರಡಿಸಲಾಗಿದೆ.

ಂ ಂ

ಈ ತಿಂಗಳ ಕೊನೆಯಲ್ಲಿ ದಿವಾನರಾದ ಶ್ರೀ ಮಾಧವರಾಯರು ಅಮೇರಿಕಾದಿಂದ ಮೈಸೂರಿಗೆ ಆಗಮಿಸುವರು.

ಂ ಂ

ಮೈಸೂರು ಸಂಸ್ಥಾನದ ಯಾವ ಉಪಹಾರ ಮಂದಿರಗಳಲ್ಲೂ ಹಾಲಿನಿಂದ ಪದಾರ್ಥಗಳನ್ನು ತಯಾರಿಸಕೂಡದೆಂದು ಮೈಸೂರು ಸರ್ಕಾರದ ಆಜ್ಞೆಯಾಗಿದೆ.

ಂ ಂ

ವಿಶ್ವಭದ್ರತಾ ಸಮ್ಮೇಳನದ ವಿಷಯದ ಸ್ಪೇಷ್ ಪ್ರಶ್ನೆ ಕೂಡದೆಂದು ಅಮೇರಿಕಾ ಫ್ರಾಕ್ಸ್ ಸಲಹೆಗೆ. ಉತ್ತರವಿತ್ತಿದೆ.

ಪ್ರತೀಕಾರ

ನವ ದೆಹಲಿ ಮಾ 12— ದಕ್ಷಿಣ ಆಫ್ರಿಕಾದಲ್ಲಿ ಜಾರಿಗೆತರಲ್ಪಟ್ಟಿರುವ ಭಾರತ ವಿರುದ್ಧ ವಾದ ಸೂಡೆಗೆ ಪ್ರತೀಕಾರವಾಗಿ ಭಾರತ ಸರ್ಕಾರವು ದಕ್ಷಿಣ ಆಫ್ರಿಕಾದೊಡನೆ ಇರುವ ಭಾರತದ ವ್ಯಾಪಾರದ ಒಪ್ಪಂದವನ್ನು ಮುಕ್ತಾಯ ಗೊಳಿಸಲು ನಿರ್ಧರಿಸಿದೆ. ಈ ಒಕ್ಕಣೆ ಭಾರತದ ಕೈಮಿಷನರ ಮೂಲಕ ನೋಟೀಸ್ನು ಸಲ್ಲಿಸಲಾಗಿದೆ.

ಲಕ್ಕವಳ್ಳಿ ಜಲಾಶಯ

ಶಿವಮೊಗ್ಗಾ ಮಾ 7 — ಭದ್ರಾ ನದಿಯ ಮೇಲೆ ಲಕ್ಕವಳ್ಳಿ ಅಣೆಕಟ್ಟನ್ನು ಕಟ್ಟುವ ಕೆಲಸವು ಮಂತ್ರಾಮತ್ ಸಚಿವರಾದ ಶ್ರೀ ಸಿದ್ದಪ್ಪನವರು ತಾ ॥ 19 ರಲ್ಲಿ ಇಕ್ಸ್ಚೆಕ್ಷ್ ಮಾಡಿದನಂತರ ಪ್ರಾರಂಭವಾಗುವೆಂದು ತಿಳಿಯಬಂದಿದೆ.

ಎಲೆಕ್ಟ್ರಿಕ್ ಟ್ರಾಲಿ ಸರ್ವಿಸ್

ಬೆಂಗಳೂರು ಮಾ 11— 50 ಲಕ್ಷ ರೂಪಾಯಿ ವ್ಯಯದಿಂದ ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಟ್ರಾಲಿ ಬಸ್ ಸರ್ವಿಸ್ಸಿನ ಯೋಜನೆಯನ್ನು ಟ್ರಾನ್ಸ್ಪೋರ್ಟ್ ಕಮಿಟಿಯವರು ಅನುಮೋದಿಸಿದಾರೆ.

ಮುಖ್ಯಸೈನ್ಯಾಧಿಕಾರಿ ಕಾರ್ಯದರ್ಶಿ

ನವದೆಹಲಿ ಮಾ 11— ಭಾರತದ ಮುಖ್ಯ ಸೇನಾಧಿಪತಿಗೆ ಅಪ್ತ ಕಾರ್ಯದರ್ಶಿಗಳಾಗಿ ಲೆ ॥ ಕ ॥ ಹಮಿದ್‌ರವರು ನೇಮಿಸಲ್ಪಟ್ಟಿರುವರು ಈ ಹುದ್ದೆಗೆ ಭಾರತೀಯರನ್ನು ನೇಮಿಸಿದ್ದು ಇದೇ ಮೊದಲು.

ಉಪಾಧ್ಯಾಯರ ಮುಷ್ಕರ

ಶನಿವಾರ ಮಾ 11— ಈ ಡಿಸ್ಟ್ರಿಕ್ಟಿನ 9 ಪ್ರಾಥಶಾಲೆಗಳಲ್ಲಿನ ಉಪಾಧ್ಯಾಯರು ಮುಷ್ಕರ ಹಿಡಿದಿರುವರು.

ಉಪನ್ಯಾಸ

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಆಶ್ರಯದಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀಮಾನ್ ಎಸ್. ವಿ. ರಂಗಣ್ಣನವರು ಹೊನ್ನಾಳಿ ಪುರಭವನದಲ್ಲಿ ನಾಳೆಯ ದಿವಸ ಸಂಜೆ ಆರೂವರೆ ಘಂಟೆಗೆ 'ನಾಟು ನಡಿ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ.

ಭೋಜನಕೂಟ

ಮಹಾರುದ್ರ ಹೋಮ ಸಮಿತಿಯವರ ಗೌರವಾರ್ಥವಾಗಿ ವೈದ್ಯ ವಿದ್ವಾನ್, ಭೀಷಣಗ್ರಂಥ ಶ್ರೀ ಬಿ. ವಿ. ಪಂಡಿತರು ನಿನ್ನೆ ದಿನ ರಾತ್ರಿ ಸಂಜನಗೂಡಿನಲ್ಲಿರುವ ತಮ್ಮ ಸ್ವಗೃಹದಲ್ಲಿ ಭೋಜನಕೂಟವೊಂದನ್ನು ಏರ್ಪಡಿಸಿದ್ದರು. ಸ್ಥಳಪರಸ್ಥಳಗಳಿಂದ ಅನೇಕ ಗಣ್ಯ ಮಹನೀಯರುಗಳು ಆಹ್ವಾನಿಸಲ್ಪಟ್ಟಿದ್ದರು.

ವೃತ್ತಾಂತ ಸಂಗ್ರಹ

ಪಂಜಾಬಿನಲ್ಲಿ ವಿಶ್ರಮಂತ್ರಿ ಮಂಡಲ ಸ್ಥಾಪನೆಯಾಯಿತೆಂದು ಸರ್ಕಾರಿ ಪ್ರಕಟನೆ ತಿಳಿಸುತ್ತದೆ.

ಂ ಂ

ಮಹಾ ಚುನಾವಣೆಗಳನ್ನು ಮುಂದುವರಿಸಬೇಕೆಂದು ಸೂಚಿಸಿ ಗ್ರೀಸಿನ ಹತ್ತು ಮಂದಿ ಮಂತ್ರಿಗಳು ರಾಜೀನಾಮೆ ಇತ್ತಿದ್ದಾರೆ.

ಂ ಂ

ಭಾರತ ರಾಷ್ಟ್ರೀಯ ಸೇನೆಯ ಮೇ ॥ ಜ ॥ ಚಟರ್ಜಿಯವರನ್ನು ಕಲ್ಕತ್ತಾಕ್ಕೆ ಕರೆತಂದು ದೆಹಲಿಗೆ ಕರೆದೊಯ್ಯಲಾಯಿತೆಂದು ಗೂತ್ತಾಗಿದೆ.

ಂ ಂ

ಮುಂಬಯಿಯ ಗಲಭೆಯಲ್ಲಿ ಪೋಲಿಸರು ಹುಷಾರಿನಿಂದ ವರ್ತಿಸಿದರೆಂದು ವೈಸ್ರಾಯರು ಭಾರತ ಕಛೇರಿಗೆ ವರದಿ ಮಾಡಿರುವರು.

ಂ ಂ

ಭಾರತಕ್ಕೆ ವ್ಯವಸಾಯ ನಿಯೋಗವನ್ನು ಕಳುಹಿಸಲು ಅಮೇರಿಕಾ ಯೋಚಿಸುತ್ತಿದೆ.

ಂ ಂ

ಸ್ಪೇನಿನ ಹಲವು ವಿದ್ಯಾರ್ಥಿಗಳು ಫ್ರಾನ್ಸಿನ ವಿರುದ್ಧ ಮೇಡ್ರಿಡ್‌ನಲ್ಲಿ ನಡೆಸಿದ ಪ್ರದರ್ಶನವನ್ನು ಪೋಲೀಸರು ಚದುರಿಸಿದರು.

ವೈತ್ಕಾಂತ ಸಂಗ್ರಹ

ಯುದ್ಧಾನಂತರ ವೈಸೂರು ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿ ಮಾಡುವ ಸಲುವಾಗಿ ವಿಶೇಷಾಧಿಕಾರಿಗಳ ನೇಮಕವಾಗುವುದಾಗಿ ತಿಳಿಯಬಂದಿದೆ.

ಮೈಸೂರ್ ಸಂಸ್ಥಾನದ ದೇವಾಲಯವನ್ನು ಹರಿಜನರಿಗೆ ತೆಗೆಯಲಾಯಿತು.

ಬೆಂಗಳೂರ ಗವರ್ನರಾದ ಸರ್ ಫ್ರೆಡ್ರಿಕ್ ಬರೋ ಸರೊಡನೆ ಸಂ॥ ನೆಹರು ಫಲಹಾರ ಮಾಡಿದರು.

ಮುಂಬಯಿಯಾದು ಗ್ರಾಮದಲ್ಲಿ ಆಸೆಗಳ ಹಾನಳೆ ಸಂತೆದೆ.

At Ranjit

From 10–3–46

Shirin Farad

—with—

RAGINI & JAYANT

At Opera

From 8–3–46

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

ಸುಭಾಷ್

ರವರ

ಜೀವನ ಚರಿತ್ರೆ

ಹುಟ್ಟಿದ್ದು, ಬೆಳೆದದ್ದು, ದೇಶಕ್ಕಾಗಿ ಸತತವೂ ದುಡಿದದ್ದು, ಇಂದು ಸಾಧಿಸಿದ್ದು ಎಲ್ಲವನ್ನೂ ಸಂಗ್ರಹಿಸಿ ಕೊಡಲಾಗಿದೆ.

ಅಂದು ಬಾಬು —

— ಇಂದು ನೇತಾಜಿ

ಬರೆದವರು "ಕಾಂತ್"

ಸಾಹಿತ್ಯ ಮಂದಿರ

ಜಗನ್ಮೋಹನ ಬಂಗ್ಲೆ ರಸ್ತೆ

ಮೈಸೂರು

ನಂಜನಗೂಡು ದೊಡ್ಡಜಾತ್ರೆ

ದನಗಳ ಪ್ರದರ್ಶನ

. 14–3–46 ರಲಾಗಾಯ್ತು 18–3–46 ರವರಿಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ, ದನಗಳ ಪ್ರದರ್ಶನವನ್ನು ಈ ಊರಿನ ಜೋಗಿ ತೋಪಿನಲ್ಲಿ ಏರ್ಪಡಿಸಿರುತ್ತೆ. ನೀರು ನೆರಳಿನ ಸೌಕರ್ಯ ಚೆನ್ನಾಗಿದೆ. ರಾತ್ರಿಗಳಿಗೆ ಸುಂಕವಿಲ್ಲ. ವೈದ್ಯ ಸಹಾಯ ಏರ್ಪಡಿಸಿದೆ. ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಎ. ವಿ. ಕೃಷ್ಣ

ಪ್ರೆಸಿಡೆಂಟ್

ಟೌನ್ ಮುನಿಸಿಪಲ್ ಕೌನ್ಸಿಲ್

ನಂಜನಗೂಡು

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಹಸಿ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamareja Agrahar, Mysore

No. R 4 / 45–46

Office of the Rationing Officer

MYSORE CITY

ಪ್ರಕಟನೆ Dated 11—3—46

ಆಹಾರದ ಅಭಾವ ಪ್ರಯುಕ್ತ ಇನ್ನು ಮುಂದೆ ಟೀ ಪಾರ್ಟಿಗಳು, ಸಂತೋಷಕೂಟಗಳು, ಸಮಾರಾಧನೆಗಳು ಮೊದಲಾದ ಸಮಾರಂಭಗಳಿಗೆ ಬೇಕಾಗುವ ಆಹಾರ ಪದಾರ್ಥಗಳಿಗೆ ಇನ್ನು ಮುಂದೆ ಸ್ಪೆಷಲ್ ಕೂಪನ್‌ಗಳನ್ನು ಕೊಡಲಾಗುವುದಿಲ್ಲವೆಂಬ ವಿಷಯವನ್ನು ಈ ಮೂಲಕ ತಿಳಿಯಪಡಿಸಿದೆ.

ಮದುವೆ, ಉಪನಯನ, ನಾಮಕರಣ ಮೊದಲಾದ ವಿಶೇಷ ಕಾರ್ಯಗಳಿಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಕನಿಷ್ಠ ಪ್ರಮಾಣದಲ್ಲಿ ಕೊಡಲು ವ್ಯವಸ್ಥೆ ಮಾಡಿದೆ.

(ಸಹಿ) ಟಿ. ವಿ. ರೆಡ್ಡಿ

ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸಂಜೀವನ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು